ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು - ೧೫

ಪಟ್ಟಿ - ೧೨

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೇ ಅಧಿವೇಶನ**

**(ಮುಂದುವರೆದ ಉಪವೇಶನ)**

**ಸೋಮವಾರ, ದಿನಾಂಕ: ೨೭ನೇ ಮಾರ್ಚ್, ೨೦೧೭**

---

## ಸಮೂಹ - I

೧. ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

೨. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೩. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

೪. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

೫. ವೈದ್ಯಕೀಯ ಶಿಕ್ಷಣ ಸಚಿವರು

೬. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೭. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು

---

## ಪಡಿತರ ವಿತರಣೆಯಲ್ಲಿನ ಅವ್ಯವಸ್ಥೆ, ಕಾರ್ಡ್‌ಬ್ಲಾಕ್, ಕೂಪನ್ ಪದ್ಧತಿಯಲ್ಲಿನ ಲೋಪದ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)--**

೧೬೬ (೧೬೬೨) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷದಲ್ಲಿ ಬ್ಲಾಕ್ ಮಾಡಲಾದ ಪಡಿತರ ಚೀಟಿಗಳ ಸಂಖ್ಯೆ ಎಷ್ಟು ; ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಪಡಿತರ ಚೀಟಿಗೆ ಆಧಾರ್ ಮತ್ತು ಮತದಾರರ ಚೀಟಿ ಹೊಂದಾಣಿಕೆ ಕಾರ್ಯ ಯಾವ ಹಂತದಲ್ಲಿದೆ ; ಹೊಂದಾಣಿಕೆಗೆ ಬಾಕಿಯಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು ;

(ಇ) ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಸರಬರಾಜು ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ; ಸಕಾಲದಲ್ಲಿ ಪಡಿತರ ಸರಬರಾಜು ಮಾಡಿ, ವಿಳಂಬ ತಡೆಯುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಈ) ಸರ್ಕಾರ ಪಡಿತರ ವಿತರಣೆಗೆ ತಂದಿರುವ ಕೂಪನ್ ವ್ಯವಸ್ಥೆಯ ಲೋಪದಿಂದಾಗಿ ಆಹಾರ ಸಾಮಾಗ್ರಿಗಳು ದಲ್ಲಾಳಿಗಳ ಪಾಲಾಗುತ್ತಿರುವುದು ನಿಜವೆ ; ಈ ನಿಟ್ಟಿನಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿ ಮತ್ತು ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ;

(ಉ) ಗ್ರಾಮೀಣ ಪ್ರದೇಶದ ಬಡ ಜನರಿಗೆ ಪಡಿತರ ವಿತರಣೆ ಮಾಡುವಲ್ಲಿ ಪಾರದರ್ಶಕತೆ ತರಲು ನ್ಯಾಯಬೆಲೆ ಅಂಗಡಿಗಳನ್ನು ನೇರವಾಗಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ತರಲು ಸರ್ಕಾರಕ್ಕಿರುವ ತೊಡಕುಗಳೇನು ; ಈ ಕುರಿತು ಸರ್ಕಾರದ ನಿಲುವೇನು ; ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಊ) ಪಡಿತರ ವಿತರಣೆಯಲ್ಲಿನ ಅವ್ಯವಸ್ಥೆ, ಕಾರ್ಡ್‌ಬ್ಲಾಕ್, ಕೂಪನ್ ಪದ್ಧತಿಯಲ್ಲಿನ ಲೋಪ ಸೇರಿದಂತೆ ಎಲ್ಲಾ ಗೊಂದಲಗಳನ್ನು ಸರಿಪಡಿಸಿ, ಬಡ ಜನರು ಪಡಿತರ ಸಾಮಾಗ್ರಿಯಿಂದ ವಂಚಿತರಾಗದಂತೆ ಮಾಡಲು ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳಲಿದೆ ?

## ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳ ಅನುದಾನ ಹೆಚ್ಚಿಸುವ ಬಗ್ಗೆ

**ಶ್ರೀ ಕಾಂತರಾಜು (ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೬೭ (೧೫೬೧) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬–೧೭ನೇ ಸಾಲಿನಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಒಂದು ಜಿಲ್ಲೆಗೆ ಕೇವಲ ಅತ್ಯಲ್ಪ ಅನುದಾನವನ್ನು ಬಿಡುಗಡೆ ಮಾಡಿದರೆ ಪ್ರವಾಸಿತಾಣಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವೆ, ಈ ಅನುದಾನವನ್ನು ಹೆಚ್ಚಿಗೆ ಮಾಡಲು ಸರ್ಕಾರ ಕ್ರಮ ವಹಿಸುವುದೇ ;

(ಇ) ೨೦೧೬–೧೭ನೇ ಸಾಲಿಗೆ ಪರಿಶಿಷ್ಟ ಜಾತಿ/ವರ್ಗ/ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರಿಗೆ ಪ್ರವಾಸಿ ಟ್ಯಾಕ್ಸಿಗಳಿಗೆ ನೀಡುತ್ತಿರುವ ಸಹಾಯಧನವನ್ನು ಹೆಚ್ಚಿಗೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರಿಗೆ ಪ್ರವಾಸಿ ಟ್ಯಾಕ್ಸಿಗೆ ಸಹಾಯಧನವನ್ನು ನೀಡುವ ಫಲಾನುಭವಿಗಳ ಸಂಖ್ಯೆಯನ್ನು ದೊಡ್ಡ ಜಿಲ್ಲೆಗಳಿಗೆ ಕನಿಷ್ಠ ಪಕ್ಷ ೪೦೦ ಕ್ಕೆ ಹೆಚ್ಚಿಗೆ ಮಾಡಲು ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದೇ ? (ತಿಳಿಸುವುದು)

## ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಜನಪ್ರಿಯ ಯೋಜನೆಗಳು

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೬೮ (೧೫೫೭) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರಕಾರದ ಜನಪ್ರಿಯ ಯೋಜನಾನುಷ್ಠಾನದ ರೂಪುರೇಷೆಗಳೇನು ; (ವಿವರ ನೀಡುವುದು)

(ಆ) ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನ ನೀಡಿಕೆ ಮತ್ತಿತರ ಸೌಲಭ್ಯಗಳ ಹಂಚಿಕೆಯಲ್ಲಿ ಉಂಟಾಗುತ್ತಿರುವ ವಿಳಂಬವನ್ನು ತಪ್ಪಿಸಲು ಇಲಾಖೆಯ ಸಕಾಲಿಕ ಕ್ರಮಗಳು ಯಾವುವು ;

(ಇ) ಹೈದ್ರಾಬಾದ್-ಕರ್ನಾಟಕ ಪ್ರದೇಶಗಳಲ್ಲಿರುವ ಹಿಂದುಳಿದ ವರ್ಗಗಳ ವಿವಿಧ ಹಾಸ್ಟೆಲ್‌ಗಳ ಸುವ್ಯವಸ್ಥೆಗಳ ಕುರಿತು ಹಾಗೂ ಕೊರತೆಯಿರುವ ಮೂಲ ಸೌಲಭ್ಯ ಸೌಕರ್ಯಗಳನ್ನು ಸಕಾಲದಲ್ಲಿ ಒದಗಿಸಿಕೊಡುವಲ್ಲಿ ಕೈಗೊಂಡ ಪರಿಣಾಮಕಾರಿ ಕ್ರಮಗಳೇನು ? (ವಿವರ ನೀಡುವುದು)

## ''ಶುಚಿ' ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳದೆ ಇರುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)–**

೧೬೯ (೧೭೧೨) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ''ಶುಚಿ'' ಯೋಜನೆ ಪ್ರಾರಂಭವಾದ ವರ್ಷ ಮತ್ತು ಉದ್ದೇಶವೇನು ;

(ಆ) ಕಳೆದ ಮೂರು ವರ್ಷಗಳಿಂದ ಇದರ ಅನುಷ್ಠಾನಕ್ಕೆ ಬಿಡುಗಡೆಯಾದ ಹಣ ಎಷ್ಟು ; ಮತ್ತು ಯೋಜನೆಯು ಅನುಷ್ಠಾನಗೊಂಡಿದೆಯೇ ; (ವಿವರ ನೀಡುವುದು)

(ಇ) ೨೦೧೭–೧೮ನೇ ಸಾಲಿನಲ್ಲಿ ಇದನ್ನು ಮುಂದುವರೆಸುವ ಕುರಿತು ಸರ್ಕಾರವು ಯಾವ ರೀತಿಯಲ್ಲಿ ಈಗಾಗಲೇ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಯಾತ್ರಿ ನಿಲಯಗಳ ನಿರ್ಮಾಣದ ಬಗ್ಗೆ

**ಶ್ರೀ ರಾಮಪ್ಪ ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)–**

೧೭೦ (೧೭೦೫) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖಾ ವತಿಯಿಂದ ನಡೆಸಲಾಗುತ್ತಿರುವ ಯಾತ್ರಿ ನಿಲಯಗಳ ಸಂಖ್ಯೆ ಎಷ್ಟು ; ಯಾತ್ರಿ ನಿಲಯಗಳನ್ನು ನಿರ್ಮಾಣ ಮಾಡಲು ಎಷ್ಟು ಅನುದಾನ ನೀಡಲಾಗಿದೆ ; (ಜಿಲ್ಲಾವಾರು ಯಾತ್ರಿ ನಿಲಯಗಳ ಸ್ಥಳ ಮತ್ತು ಅವುಗಳ ದೂರವಾಣಿ ಸಂಖ್ಯೆಗಳನ್ನು ನೀಡುವುದು)

(ಆ) ಮುಧೋಳ ತಾಲ್ಲೂಕಿನಲ್ಲಿ ಯಾತ್ರಿ ನಿವಾಸ ನಿರ್ಮಾಣ ಮಾಡುವ ಉದ್ದೇಶ ಹೊಂದಿದೆಯೇ ;

(ಇ) ಇದಕ್ಕೆ ಸಂಬಂಧಿಸಿದಂತೆ ಈವರೆಗೂ ಎಷ್ಟು ಪ್ರಸ್ತಾವನೆಗಳು ಬಂದಿರುತ್ತವೆ ?

## ಹಿರಿಯ ನಾಗರಿಕರ ಸೌಲಭ್ಯಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೭೧ (೧೬೫೨) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹಿರಿಯ ನಾಗರಿಕರಿಗೆ ನೀಡುತ್ತಿರುವ ಸೌಲಭ್ಯಗಳು ಯಾವುವು ;

(ಆ) ೨೦೧೬–೧೭ನೇ ಸಾಲಿನಲ್ಲಿ ಹಿರಿಯ ನಾಗರಿಕರಿಗೆ ನೀಡಲಾಗುವ ಸೌಲಭ್ಯಗಳಿಗೆ ಮೀಸಲಿರಿಸಲಾದ ಮೊತ್ತವೆಷ್ಟು ;

(ಇ) ಹಿರಿಯ ನಾಗರಿಕರನ್ನು ಗುರುತಿಸಿ, ಆಶ್ರಯ ತಾಣವನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

## ರಾಜ್ಯದಲ್ಲಿ ಡೆಂಗ್ಯೂ ಜ್ವರ ವ್ಯಾಪಿಸುತ್ತಿರುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)–**

೧೭೨ (೧೫೭೦) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇತ್ತೀಚೆಗೆ ಡೆಂಗ್ಯೂ ಜ್ವರ ಉಲ್ಬಣಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಮಾರಣಾಂತಿಕ ಕಾಯಿಲೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕಿನ ಚಿಕ್ಕ ಕೊಡಗಲಿ ತಾಂಡದಲ್ಲಿ ೧೦೦ಕ್ಕೂ ಹೆಚ್ಚು ಜನರು ಡೆಂಗ್ಯೂ ಜ್ವರದಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಈ ತಾಂಡಾದ ನಿವಾಸಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಡೆಂಗ್ಯೂ ಜ್ವರ ರಾಜ್ಯದ ಇತರೆ ಪ್ರದೇಶಗಳಲ್ಲಿ ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆಯೇ ?

## ಮಂಗಳಮುಖಿಯರಿಗಾಗಿ ಪುನರ್ವಸತಿ ಕೇಂದ್ರಗಳು ಹಾಗೂ ಭಿಕ್ಷಾಟನೆ ನಿರ್ಮೂಲನೆ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೭೩ (೧೭೧೫+೧೭೫೫) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭಿಕ್ಷಾಟನೆ ನಿರ್ಮೂಲನೆ ಕಾನೂನನ್ನು ಸಮರ್ಪಕವಾಗಿ ಜಾರಿಗೆ ತರಲಾಗುತ್ತಿದೆಯೇ ; ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿರುವವರು ಯಾರು ;

(ಆ) ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಅನೇಕ ಮಹಿಳೆಯರು, ಮಕ್ಕಳು ಅದರಲ್ಲೂ ಮುಖ್ಯವಾಗಿ ಮಂಗಳಮುಖಿಯರು ಭಿಕ್ಷೆ ಬೇಡುತ್ತಿದ್ದು, ಇದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಭಿಕ್ಷಾಟನೆ ಮಾಡುವವರನ್ನು ಹಿಡಿದು ಅವರಿಗೆ ಪುನರ್ ವ್ಯವಸ್ಥೆ ಕಲ್ಪಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೇ ;

(ಈ) ಭಿಕ್ಷುಕರ ಪುನರ್ವಸತಿ ಕೇಂದ್ರಗಳಂತೆ ಮಂಗಳಮುಖಿಯರಿಗಾಗಿ ಪುನರ್ವಸತಿ ಕೇಂದ್ರಗಳನ್ನು ತೆರೆಯಲಾಗಿದೆಯೇ ;

(ಉ) ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಅವರಿಗೆ ಮೀಸಲಾತಿ ನೀಡಲಾಗುತ್ತಿದೆಯೇ ?

## ಭ್ರೂಣ ಹತ್ಯೆಯ ಬಗ್ಗೆ

**ಶ್ರೀ ಟಿ. ಎ. ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು)–**

೧೭೪ (೧೭೩೬) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ ಒಟ್ಟು ಎಷ್ಟು ಭ್ರೂಣಹತ್ಯೆ ಪ್ರಕರಣಗಳು ಬೆಳಕಿಗೆ ಬಂದಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಭ್ರೂಣಹತ್ಯೆಯಲ್ಲಿ ಭಾಗಿಯಾದ ವೈದ್ಯರು ಮತ್ತು ಕುಟುಂಬದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ; ಭಾಗಿಯಾದವರ ಸಂಖ್ಯೆ ಎಷ್ಟು ;

(ಇ) ಭ್ರೂಣಹತ್ಯೆ ತಡೆಯಲು ಇರುವ ಕಾನೂನು ಯಾವುದು ; (ವಿವರ ನೀಡುವುದು)

(ಈ) ರಾಜ್ಯದ ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿ ಹೆಚ್ಚಿನ ಭ್ರೂಣಹತ್ಯೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸಾಂಸ್ಕೃತಿಕ ಮಂದಿರಗಳನ್ನು ಮಂಜೂರು ಮಾಡಿರುವ ಬಗ್ಗೆ

**ಶ್ರೀ ಹೆಚ್. ಎಂ. ರೇವಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)–**

೧೭೫ (೧೫೭೯) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ರಾಜ್ಯದಲ್ಲಿ ೨೦೧೩-೧೪ ರಿಂದ ೨೦೧೬-೧೭ ರವರೆಗೆ ಎಷ್ಟು ಸಾಂಸ್ಕೃತಿಕ ಮಂದಿರಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ ; ಇವುಗಳ ಕಾಮಗಾರಿ ಯಾವ ಹಂತದಲ್ಲಿದೆ ; (ವರ್ಷಾವಾರು, ಜಿಲ್ಲಾವಾರು ಮಂಜೂರಾದ ಅನುದಾನದ ಮಾಹಿತಿ ನೀಡುವುದು)

(ಆ) ಎಲ್ಲಾ ಜಿಲ್ಲೆಗಳಿಗೆ ಅನುದಾನವನ್ನು ಸಮಾನವಾಗಿ ಹಂಚಿಕೆ ಮಾಡಲಾಗಿದೆಯೇ ?

## ಡಯಾಲಿಸಿಸ್ ಕೇಂದ್ರಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಡೆಸುವ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು)–**

**ಶ್ರೀ ಹೆಚ್. ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)–**

೧೭೭(೧೬೮೬+೧೫೮೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಡಯಾಲಿಸಿಸ್ ಕೇಂದ್ರಗಳೆಷ್ಟು ; ಇವುಗಳಲ್ಲಿ ಎಷ್ಟು ಕೇಂದ್ರಗಳಲ್ಲಿ ಡಯಾಲಿಸಿಸ್ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ತಾಲ್ಲೂಕುವಾರು ಡಯಾಲಿಸಿಸ್ ಕೇಂದ್ರಗಳನ್ನು ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ ;

(ಇ) ಇನ್ನು ಎಷ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳ ಅವಶ್ಯಕತೆ ಇದೆ ; (ವಿವರ ನೀಡುವುದು)

(ಈ) ಸರ್ಕಾರದ ವತಿಯಿಂದ ಎಷ್ಟು ಹೊಸ ಡಯಾಲಿಸಿಸ್ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ; ಡಯಾಲಿಸಿಸ್ ಕೇಂದ್ರಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಡೆಸಲು ಸರ್ಕಾರದ ಚಿಂತನೆ ಇದೆಯೇ ; ಹಾಗಿದ್ದಲ್ಲಿ, ಸರ್ಕಾರವೇ ಇದನ್ನು ಮುನ್ನಡೆಸಲು ಇರುವ ತೊಂದರೆಗಳೇನು ; (ಪೂರ್ಣ ಮಾಹಿತಿ ಒದಗಿಸುವುದು)

(ಉ) ಡಯಾಲಿಸಿಸ್ ಕೇಂದ್ರವೊಂದನ್ನು ತೆರೆಯಲು ತಗಲುವ ವೆಚ್ಚ ಎಷ್ಟು ;

(ಊ) ರೋಗಿಗಳಿಗೆ ಪ್ರತಿ ಡಯಾಲಿಸಿಸ್ ಚಿಕಿತ್ಸೆಗೆ ತಗಲುವ ವೆಚ್ಚ ಎಷ್ಟು ; ಇದಕ್ಕೆ ವಿಧಿಸಲಾಗಿರುವ ಮಾನದಂಡವೇನು ? (ವಿವರ ನೀಡುವುದು)

## ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದ ಅನುದಾನ ಬಿಡುಗಡೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)–**

೧೭೭ (೧೭೪೫) ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ವಿಧಾನ ಪರಿಷತ್ ಸದಸ್ಯರನ್ನು ಮಂಡಳಿಯ ಸದಸ್ಯರನ್ನಾಗಿ ಸರ್ಕಾರ ನಿಯೋಜಿಸಿದ್ದರೂ, ಅವರಿಗೆ ಅನುದಾನ ಒದಗಿಸದಿರಲು ಕಾರಣಗಳೇನು ;

(ಆ) ಈ ಹಿಂದೆ ವಿಧಾನ ಪರಿಷತ್ ಸದಸ್ಯರಿಗೆ ಅನುದಾನ ಒದಗಿಸಿದ್ದಲ್ಲಿ, ಇಲ್ಲಿಯವರೆಗೆ ಒದಗಿಸಿದ ಅನುದಾನ ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಇ) ಅನುದಾನ ಒದಗಿಸದೆ ಇದ್ದಲ್ಲಿ, ವಿಧಾನ ಪರಿಷತ್ ಸದಸ್ಯರಿಗೆ ಅನುದಾನ ಒದಗಿಸುವ ಬಗ್ಗೆ ಯಾವಾಗ ಆದೇಶ ಹೊರಡಿಸಲಾಗುವುದು ;

(ಈ) ೨೦೧೬–೧೭ನೇ ಸಾಲಿನಲ್ಲಿ ಅಧಿಕಾರಿಗಳ ವಿವೇಚನಾ ಕೋಟಾದಡಿ ಕಾಯ್ದಿರಿಸಿದ ಹಣ ಎಷ್ಟು ; ಈ ಹಣವನ್ನು ಯಾವ ಯಾವ ಕಾಮಗಾರಿಗಳಿಗಾಗಿ ವಿನಿಯೋಗಿಸಲಾಗಿದೆ ? (ವಿವರವಾದ ಮಾಹಿತಿ ನೀಡುವುದು)

## ಡಯಾಗ್ನೋಸ್ಟಿಕ್ ಸೆಂಟರ್‌ಗಳಲ್ಲಿನ ಶುಲ್ಕದ ಗೊಂದಲದ ಬಗ್ಗೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)–**

೧೭೮ (೧೫೫೨) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ರಾಜ್ಯದಲ್ಲಿರುವ ಡಯಾಗ್ನೋಸ್ಟಿಕ್ ಸೆಂಟರ್/ಆರೋಗ್ಯ ಪ್ರಯೋಗಾಲಯಗಳ ಸಂಖ್ಯೆ ಎಷ್ಟು ; (ವಿವರಗಳನ್ನು ಜಿಲ್ಲಾವಾರು ಒದಗಿಸುವುದು)

(ಆ) ಈ ಕೇಂದ್ರಗಳನ್ನು ತೆರೆಯಲು ಅನುಸರಿಸುವ ಕ್ರಮಗಳೇನು ; ಇದಕ್ಕೆ ಅಗತ್ಯವಾದ ಪರಿಣಿತ ತಜ್ಞರನ್ನು ನೇಮಕ ಮಾಡಿಕೊಳ್ಳಲಾಗಿದೆಯೇ ;

(ಇ) ಸದರಿ ಪ್ರಯೋಗಾಲಯಗಳು ಎಲ್ಲೆಂದರಲ್ಲಿ ಪ್ರಾರಂಭಗೊಳ್ಳುತ್ತಿರುವುದಲ್ಲದೆ ಶುಲ್ಕವನ್ನು ಸರ್ಕಾರ ನಿಗಧಿಪಡಿಸಿದಂತೆ ರೋಗಿಗಳಿಂದ ಪಡೆಯದೇ ತಾವು ವಿಧಿಸಿದ ದರವನ್ನು ಕಡ್ಡಾಯ ಮಾಡಿವೆಯೇ ; (ವಿವರ ನೀಡುವುದು)

(ಈ) ಇಂತಹ ಪ್ರಯೋಗಶಾಲೆಗಳನ್ನು ಸರ್ಕಾರ ತಪಾಸಣೆ ಮಾಡಿರುವುದೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಉ) ಇವುಗಳಿಗೆ ಅನುಮತಿ ನೀಡುವ ಮುನ್ನ ಅಗತ್ಯವಾದ ಕ್ರಮಗಳನ್ನು ಜರುಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು (ವಿವರ ನೀಡುವುದು)

**ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯದ ಬಗ್ಗೆ**

**ಶ್ರೀ ಜಿ.ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೭೯ (೧೫೩೩೭) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಚಿತ್ರದುರ್ಗ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಹಾಲಿ ಐಸಿಯುನಲ್ಲಿ ಇರುವ ಬೆಡ್‌ಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಮುಖ್ಯವಾಗಿ ಐಸಿಯು (ತೀವ್ರ ನಿಗಾ ಘಟಕ)ನಲ್ಲಿ ಬೆಡ್‌ಗಳಿಲ್ಲದೆ ರೋಗಿಗಳು ಪರದಾಡುತ್ತಿದ್ದು, ಇದನ್ನು ಸರಿಪಡಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು ;

(ಉ) ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ, ಮಾಹಿತಿ ಒದಗಿಸುವುದು ;

(ಊ) ಆಸ್ಪತ್ರೆಯಲ್ಲಿ ಪ್ರಸ್ತುತ ಇರುವ ಆಂಬ್ಯುಲೆನ್ಸ್‌ಗಳ ಸಂಖ್ಯೆ ಎಷ್ಟು ; ಇದು ರೋಗಿಗಳ ಸೇವೆಗೆ ಅವಶ್ಯವಿರುವ ಸಂಖ್ಯೆಯಲ್ಲಿ ಇವೆಯೇ ? (ಮಾಹಿತಿ ಒದಗಿಸುವುದು)

## ಎಂ.ಎಸ್.ಪಿ.ಟಿ.ಸಿ ವತಿಯಿಂದ ಆಹಾರ ಸರಬರಾಜುದಾರರಿಗೆ ಹಣ ನೀಡುವ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)-**

೧೮೦ (೧೫೭೪) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಎಂ.ಎಸ್.ಪಿ.ಟಿ..ಸಿ ೧೩೬ ಕೇಂದ್ರಗಳಿಂದ ಪೌಷ್ಠಿಕ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆಯೇ ; ಆದರೆ, ಸದರಿ ಸಂಸ್ಥೆಯವರು ಆಹಾರ ಸರಬರಾಜು ಮಾಡುತ್ತಿರುವ ಸರಬರಾಜುದಾರರಿಗೆ ನಿಗದಿತ ವೇಳೆಯಲ್ಲಿ ಹಣ ಸಂದಾಯ ಮಾಡುತ್ತಿದ್ದಾರೆಯೇ ; (ವಿವರ ನೀಡುವುದು) ಹಾಗೂ ೨೦೧೪-೧೫, ೨೦೧೫-೧೬ ಮತ್ತು ೨೦೧೬-೧೭ನೇ ಸಾಲಿನವರೆಗೆ ಹಣ ಸಂದಾಯವಾಗಿರುವ ಮತ್ತು ಹಣ ಸಂದಾಯಕ್ಕೆ ಬಾಕಿ ಇರುವ ಮೊತ್ತವೆಷ್ಟು ; (ವಿವರ ನೀಡುವುದು)

(ಆ) ಸ್ಥಳೀಯ ಸಿ.ಡಿ.ಪಿ.ಓ. ಅಧಿಕಾರಿಗಳು ನೋಡಲ್ ಅಧಿಕಾರಿಗಳಾದರೂ ಸಹ ಎಂ.ಎಸ್.ಪಿ.ಟಿ.ಸಿ.ಯ ಎಲ್ಲಾ ಕಾರ್ಯಚಟುವಟಿಕೆಗಳ ಸಂಪೂರ್ಣ ಹೊಣೆ ಇವರದಾಗಿದ್ದು, ಅಂಗನವಾಡಿ ಕೇಂದ್ರಗಳಿಗೆ ಎಂ.ಎಸ್.ಪಿ.ಟಿ.ಸಿ ಮುಖೇನ ಕಚ್ಚಾ ಆಹಾರ ಸರಬರಾಜು ಮಾಡುತ್ತಿರುವ ಆಹಾರ ಸರಬರಾಜುದಾರರಿಗೆ ನಿಗದಿತ ಸಮಯಕ್ಕೆ ಹಣ ಸಂದಾಯವಾಗುವಂತೆ ಮಾಡುವ ಜವಾಬ್ದಾರಿ ಇದ್ದರೂ ಸಹ, ಸದರಿ ಅಧಿಕಾರಿಗಳು ಕರ್ತವ್ಯ ನಿರ್ಲಕ್ಷ್ಯ ತೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪೌಷ್ಠಿಕ ಆಹಾರ ಸರಬರಾಜು ಮಾಡುತ್ತಿರುವ ಸರಬರಾಜುದಾರರಿಗೆ ಆದ್ಯತೆಯ ಅನುಸಾರ ಹಣ ಸಂದಾಯವಾಗುತ್ತಿದೆಯೇ ? (ವಿವರ ನೀಡುವುದು)

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 1155 – ಪಿ8 – 1500 ಪ್ರತಿಗಳು